Puttaswamaiah saying that one Officer Deputy Director of Social Welfare has not been kept under suspension though the Vigilance Commission had sent a report to Government.

The fact is that on 13-1-1976 the Vigilance Commission had sent a report to the Government. As I promised on the floor of this House this morning, I got that file and I have passed orders keeping that officer under suspension.

(*There was cheer from the members*)

Bangalore Development Authority Bill, 1976.

Motion to Consider

SRI D. DEVARAJ URS (Chief Minister).—I beg to move

"That the Bangalore Development Authority Bill, 1976 be taken into consideration."

MR. DEPUTY SPEAKER.—Motion moved.

"That the Bangalore Development Authority Bill, 1976 be taken in taken into consideration."

ಶ್ರೀ ಡಿ. ದೇವರಾಜ ಅರಸ್.–ಮಾನ್ಯ ಉಪಾಧ್ಯಕ್ಷರೇ ಬೆಂಗಳೂರು ಮಹಾ ನಗರ ಒಂದು ಗೊತ್ತಾದ ನಿರ್ದಿಷ್ಟವಾದ ಮತ್ತು ಯೋಜಿತವಾದ ರೀತಿಯಲ್ಲಿ ಇನ್ನೂ ಮೇಲಾದರೂ ಹತೋಟಿಯಲ್ಲಿ ಬೆಳೆಯಬೇಕು ಮತ್ತು ಬೆಳೆಯುತ್ತಾ ಇರತಕ್ಕ ನಗರಕ್ಕೆ ಬೇಕಾದಂಥ ಸಕಲ ಸೌಕರ್ಯಗಳು ದೊರಕಬೇಕು ಎಂಬೆಲ್ಲಾ ದೃಷ್ಟಿಯಿಂದ, ವಿಧ ವಿಧವಾಗಿ, ಬೇರೆ ಬೇರೆ ಹೆಸರುಗಳಿಂದ ಕೂಡಿದ ಸಂಸ್ಥೆಗಳನ್ನು ಕ್ರೋಢೀಕರಿಸಿ, ಈ ಈ ನಿಟ್ಟಿನಲ್ಲಿ ಒಂದೇ ಒಂದು ಸಂಸ್ಥೆ ಕೆಲಸ ಮಾಡುವುದು ಉಚಿತ ಎನ್ನುವ ಅಭಿಪ್ರಾಯ ಸರ್ಕಾರಕ್ಕಿದ್ದು, ಈ ವಿಷಯವನ್ನು ಮಾನ್ಯ ಸಭೆಯ ಒಪ್ಪಿಗೆಗಾಗಿ ತಂದಿದ್ದೇವೆ. ಇದರ ಅಗತ್ಯತೆಯನ್ನು ಮಾನ್ಯ ಸಭೆಯು ಒಪ್ಪಬೇಕೆಂದು ನಾನು ಪೂರ್ವಭಾವಿಯಾಗಿಯೇ ನಂಬುತ್ತೇನೆ. ಬೆಂಗಳೂರು ಮಹಾ ನಗರದಲ್ಲಿ, ನಗರಸಭೆ ಒಂದು ಕಡೆ ಇದೆ ; ನಗರಾಭಿವೃದ್ಧಿ ಮಂಡಲಿ ಒಂದು ಕಡೆ ಇದೆ ; ಗೃಹ ನಿರ್ಮಾಣ ಮಂಡಲಿ ಒಂದು ಕಡೆ ಇದೆ ; ಏರಿಯಾ ಅಭಿವೃದ್ಧಿ ಮಂಡಲಿ ಒಂದು ಕಡೆ ಇದೆ ಮತ್ತು ಪ್ಲಾನಿಂಗ್ ಅಥಾರಿಟಿ—ಹೀಗೆ ವಿವಿಧ ಸಂಸ್ಥೆಗಳು ಕೆಲಸ ಮಾಡಿಕೊಂಡು ಹೋಗುತ್ತಿದ್ದವು. ಹೇಗೆ ಬೇರೆ ಬೇರೆ ಸಂಸ್ಥೆಗಳನ್ನು ಸಾಪ್ಥನೆ ಮಾಡುವಾಗ, ಬೇರೆ ಬೇರೆ ಕಾನೂನುಗಳನ್ನು ಮಾಡಿ ಸ್ಥಾಪನೆ ಮಾಡಿದರು. ಈಗ ನಮಗೆ ಇದರಿಂದ ಆಗಬೇಕಾದಂಥ ಪ್ರಯೋಜನ ಗಳಿಗಿಂತ ಅಡಚಣೆಗಳೇ ಜಾಸ್ತಿಯಾಗುತ್ತಿವೆ. ಈ ಅಡಚಣೆಗಳು ಯಾವುವೆಂದರೆ, ಒಂದನೆಯಾಗಿ, ಈ ನಾಲ್ಕಾರು ಸಂಸ್ಥೆಗಳು ಒಂದಕ್ಕೊಂದು ಹೊಂದಿಕೊಂಡು ಕೆಲಸ ಮಾಡುವುದು ಕಷ್ಟ. ಇದರಿಂದ ಏನಾಯಿತು ಎಂದರೆ, ಒಂದೇ ಕೆಲಸವನ್ನು ಒಂದಕ್ಕಿಂತ ಹೆಚ್ಚು ಸಂಸ್ಥೆಗಳು ಮಾಡುವಂಥ ಪರಿಸ್ಥಿತಿ ಉಂಟಾಯಿತು ? ಮತ್ತು ಅಧಿಕಾರ ಕೂಡ ಕೇಂದ್ರೀಕೃತವಾಗಿ, ಆಯಾಯಾ ಸಂಸ್ಥೆಗಳವರು ಅವರಿಗಿರುವ ಅಧಿಕಾರವನ್ನು ಚಲಾಯಿಸತಕ್ಕ ಪರಿಸ್ಥಿತಿ ಬಂತು. ನಗರಾಭಿವೃದ್ಧಿ ಮಂಡಲಿಯವರು ನಿವೇಶನ ಹಂಚುವುದು; ಗೃಹನಿರ್ಮಾಣ ಮಂಡಲಿಯವರು ಮನೆ ಕಟ್ಟಿಸುವುದು, ಇನ್ನೊಬ್ಬರು ಇನ್ನೊಂದು ಮಾಡುವುದು ಹೀಗಲ್ಲಾ ಮಾಡುವುದಕ್ಕೆ ಹೋದಾಗ, ಅವರು ಹಾಕಿದಂಥ ಯೋಜನೆ ಇವರಿಗೆ ಹಿಡಿಸದಿರುವುದು ; ಇವರು ಹಾಕಿದಂಥ ಯೋಜನೆ ಅವರಿಗೆ ಹಿಡಿಸದಿರುವುದು–ಹೀಗೆಲ್ಲಾ ಆಯಿತು. ಹೀಗೆಲ್ಲಾ ಆದದ್ದರಿಂದ, ಒಂದಲ್ಲ ಒಂದು ರೀತಿಯಲ್ಲಿ ತೀರಾ ಅವ್ಯವಸ್ಥಿತವಾಗಲ್ಲದಿದ್ದರೂ ವ್ಯವಸ್ಥಿತವಲ್ಲದ ರೀತಿಯಲ್ಲಿ ಬೆಂಗಳೂರು ನಗರ ಬೆಳೆಯುವುದಕ್ಕೆ ಬಹಳಮಟ್ಟಿಗೆ ಅವಕಾಶವಾಯಿತು.

ಇತ್ತೀಚೆಗೆ ದೆಹಲಿಯಲ್ಲೂ ಕೂಡ ದೆಹಲಿ ಅಭಿವೃದ್ಧಿ ಪ್ರಾಧೀಕಾರ ಎಂದು ಮಾಡಿ, ಆ ಸಂಸ್ಥೆಗೆ ನಗರಕ್ಕೆ ಸಂಬಂಧಪಟ್ಟ ಎಲ್ಲ ಕಾರ್ಯಗಳನ್ನು ನಿರ್ವಹಣೆ ಮಾಡುವುದಕ್ಕೆ ಅವಕಾಶ ಮಾಡಿಕೊಡಲಾಯಿತು. ಈಗ ಆ ಪ್ರಾಧೀಕಾರವು ಕೆಲಸ ಮಾಡುತ್ತಿರುವುದನ್ನು ನೋಡಿರುವವರು ಏನು ಹೇಳುತ್ತಿದ್ದಾರೆ ಎಂದರೆ, ಈಗ ದೆಹಲಿ ನಗರ ಚೆನ್ನಾಗಿ, ಸುವ್ಯವಸ್ಥಿತವಾಗಿ ಬೆಳೆಯವುದಕ್ಕೆ ಸಾಧ್ಯವಾಗಿದೆ ಎಂದು ಅದನ್ನೇ ಅನುಸರಿಸಿ ನಮ್ಮ ಬೆಂಗಳೂರು ಮಹಾ ನಗರ ಬಹಳ ದೊಡ್ಡದಾಗಿ ಬೆಳೆಯುತ್ತಿದೆ ; ಬೆಳೆಯುತ್ತಾ ಇರತಕ್ಕ ನಗರಕ್ಕೆ, ನಾವು ಒಂದು ಸಂಸ್ಥೆಯನ್ನು ಸ್ಥಾಪನೆ ಮಾಡಿ, ನಗರದ ಚಿಳವಣಿಗೆ ಒಂದು ಗೊತ್ತಾದ ನಿರ್ದಿಷ್ಟ ರೂಪದಲ್ಲಿ ಬೆಳೆಯಬೇಕು ಎನ್ನುವ ಅಭಿಲಾಷೆ ; ಮತ್ತು ಹಿಂದುಳಿದ ಜನ ಹಾಗೂ ಸಂಪಾದನೆ ಕಡಿಮೆ ಇರತಕ್ಕ ಜನರಿಗೆ ಮನೆ ಕಟ್ಟುವುದಕ್ಕೆ ನಿವೇಶನಗಳ ವ್ಯವಸ್ಥೆ ಮಾಡುವುದು ರಸ್ತೆಗಳ ನಿರ್ಮಾಣ ಈ ಎಲ್ಲಾ ಕಾರ್ಯಗಳಿಗೂ ಬೆಂಗಳೂರು ಅಭಿವೃದ್ಧಿ ಪ್ರಾಧೀಕಾರ ಎಂದು ಮಾಡಿದೆವು. ಇಲ್ಲಿಯವರೆಗೆ ನಗರಾಭಿವೃದ್ಧಿ ಮಂಡಲಿ ಏನು ಕೆಲಸ ಮಾಡುತ್ತಿತ್ತು. ಆ ಕೆಲಸವನ್ನೆಲ್ಲಾ ಬೆಂಗಳೂರು ಅಭಿವೃದ್ಧಿ ಪ್ರಾಧೀಕಾರ ಮಾಡತಕ್ಕದಾಗಿದೆ. ನಗರ ಯೋಜನಾ ಮಂಡಲಿಯ ಕೆಲಸವನ್ನು ಇನ್ನು ಮುಂದೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಾಡುತ್ತದೆ, ಹಾಗೆ, ಗೃಹನಿರ್ಮಾಣ ಮಾಡಲಿ ಇದರ ವ್ಯಾಪ್ತಿ ಇಲ್ಲಿಯವರೆಗೆ ಇಡೀ ಕರ್ನಾಟಕ ರಾಜ್ಯಕ್ಕೇ ವ್ಯಾಪಿಸಿತ್ತು. ಈಗ ಬೆಂಗಳೂರು ನಗರವನ್ನು ಮಾತ್ರ ಅದರ ವ್ಯಾಪ್ತಿಯಿಂದ ತೆಗೆದು, ಬೆಂಗಳೂರು ಅಭಿವೃದ್ಧಿ ಪ್ರಾಧೀಕಾರಕ್ಕೆ ಸೇರಿಸಲಾಗಿದೆ. ಬೆಟರ್‌ಮೆಂಟ್ ಲೆವಿ ಹೇಗೆ ಹಾಕತಕ್ಕದು, ವಸೂಲಿ ಹೇಗೆ ಮಾಡುವುದು, ಅದಕ್ಕೆ ಅಥಾರಿಟ್ಟಿ ಯಾರು, ಅವರ ಅಧಿಕಾರ ಏನು; ಇದನ್ನು ಯಾವ ರೀತಿ ಕಾನ್‌ಸ್ಟಿಟ್ಯೂಟ್ ಮಾಡಬೇಕು–ಈ ಎಲ್ಲದರ ಬಗ್ಗೆ ಕಲಮುಗಳನ್ನು ಇದರಲ್ಲಿ ಸೇರಿಸಿದ್ದಾರೆ.

ಇಲ್ಲಿ ವಿಶೇಷವಾದ ಒಂದು ವಿಚಾರವೇನೆಂದರೆ, ಒನೇ ಅಧ್ಯಾಯದ ಸೆಕ್ಷನ್ ೫೧ರಲ್ಲಿ ಹೊಸದಾಗಿ ''ಕಾನ್‌ಸ್ಟಿಟ್ಯೂಷನ್ ಆಫ್ ಅರ್ಬ್ ಕಮಿಷನ್'' ಎಂದು ಒಂದು ಹೊಸ ಬಾಡಿಯನ್ನು ಕಾನ್‌ಸ್ಟಿಟ್ಯೂಟ್ ಮಾಡುವುದಕ್ಕೆ ಅಧಿಕಾರ ತೆಗೆದುಕೊಂಡಿದ್ದಾರೆ. ಇದರ ಜೊತೆಗೇ, ಇಲ್ಲಿಯವರೆಗೆ ನಗರಾಭಿವೃದ್ಧಿ ಮಂಡಲಿಯಲ್ಲಿದ್ದ ಅಧಿಕಾರ, ಇನ್ನು ಮೇಲೆ ರದ್ದಾಗುತ್ತದೆ. ಇನ್ನು ಯೋಜನಾ ಪ್ರಾಧಿಕಾರದ ಕೆಲಸವನ್ನೂ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕೊಟ್ಟಿರುವುದರಿಂದ, ಆ ಬಾಡಿ ಕೂಡ ಇನ್ನು ಮೇಲೆ ಇರುವುದಿಲ್ಲ. ಆದುದರಿಂದ, ನಮ್ಮ ಬೆಂಗಳೂರು ಮಹಾ ನಗರ ಒಂದು ನಿರ್ದಿಷ್ಟವಾದ ಯೋಜಿತ ರೀತಿಯಲ್ಲಿ ಬೆಳವಣಿಗೆಯಾಗಬೇಕು. ಅದರಿಂದ ಎಲ್ಲರಿಗೂ ಮನೆ ಕಟ್ಟುವುದುಕ್ಕೆ ಅವಕಾಶ ದೂರಕುವಂಥ ವ್ಯವಸ್ಥೆಯಾಗಬೇಕು ಎನ್ನುವ ದೃಷ್ಟಿಯಿಂದ ಬೆಂಗಳೂರು ಅಭಿವೃದ್ಧಿ ಪ್ರಾಧೀಕಾರವನ್ನು ಸ್ಥಾಪನೆ ಮಾಡುವುದಕ್ಕಾಗಿ ಈ ಮಸೂದೆಯನ್ನು ಸಭೆಯ ಮುಂದೆ ತಂದಿದ್ದೇವೆ.

ಹಿಂದೆ ಆರ್ಡಿನೆನ್ಸ್ ಕೂಡ ಮಾಡಿದ್ದೆವು, ಆರ್ಡಿನೆನ್ಸ್ ರೀಪ್ಲೇಸ್ ಮಾಡಿ ತಮ್ಮ ಮುಂದೆ ಈ ಬಿಲ್ಲನ್ನು ಇಟ್ಟಿದ್ದೇವೆ. ಈ ಅಥಾರಿಟಿಯಿಂದ ಬೆಂಗಳೂರು ನಗರಕ್ಕೆ ತುಂಬಾ ಅನುಕೂಲವಾಗುತ್ತದೆ ಎನ್ನುವ ವಿಶ್ವಾಸ ಸರ್ಕಾರಕ್ಕೆ ಇದೆ. ಈಗತಾನೇ ಕೆಲವು ಮಾನ್ಯ ಸದಸ್ಯರು ಮಾತನಾಡುತ್ತಾ ಮಾಡಿದ ಟೀಕೆಗಳನ್ನು ನಾನು ಕೇಳಿದೆನು ; ಅವರು ಎಷ್ಟೊಂದು ಬಾಡಿಗಳನ್ನು ಮಾಡುತ್ತಿದ್ದೀರಿ ಎಂದು ಹೇಳಿದರು, ಅಲ್ಲದೆ ಚೇರ್ಮನರವರನ್ನು ಮಾಡುವುದಕ್ಕಾಗಿ ಈ ರೀತಿ ಮಾಡುತ್ತಿದ್ದಾರೆಂದು ಹೇಳಿದರು. ನಾವು ಈಗ ಮಾಡಿರುವುದು ನಾಲ್ಕಾರು ರೂಪದಲ್ಲಿದ್ದಂತ ಸಂಸ್ಥೆಗಳನ್ನು ಒಂದೇ ಮಾಡುತ್ತಿದ್ದೇವೆ.

6-00 P.M.

ಶ್ರೀ ಕೋಣಂದೂರು ಲಿಂಗಪ್ಪ.—ನಾಲ್ಕಾರನ್ನು ಸೇರಿಸಿ ಮಾಡಿರುವುದು ಇದೊಂದೇ.

ಶ್ರೀ ಡಿ. ದೇವರಾಜ ಅರಸ್.—ಇದರಲ್ಲಿ ಆಗತ್ಯ ಕಂಡುಬಂತು ಮಾಡಿದ್ದೇವೆ. ನಾಲ್ಕಾರು ಸಂಸ್ಥೆಗಳಿಂದ ತೊಂದರೆ ಎಲ್ಲಿ ಇದೆಯೋ ಅಲ್ಲಿ ಒಂದೇ ಮಾಡೋಣ. ತೊಂದರೆ ಇಲ್ಲದ ಕಡೆ ಅನುಕೂಲದೃಷ್ಟಿಯಿಂದ ೨-೩ ಮಾಡೋಣ. ಈಗತಾನೇ ಪಾಸು ಮಾಡಿದಂತ ಬಿಲ್ಲುಗಳಲ್ಲಿ ಮುನಿಸಿಪಾಲಿಟಿಗಳೇ ಎಲ್ಲಾ ಮಾಡತ್ತವೆ, ಟ್ರಸ್ಟ್‌ಬೋರ್ಡ್ ಬೇಡ ಎಂದು ಹೇಳಿದಿರಿ. ಟ್ರಸ್‌ಬೋರ್ಡ್ ದೊಡ್ಡ ದೊಡ್ಡ ಪಟ್ಟಣಗಳಿಗೆ ಅನ್ವಯವಾಗಲಿ ಎಂದು ಮಾಡಿದ್ದು. ಜನತೆಗೆ ಅದರ ಆಗತ್ಯತೆ ಇರುವುದು ಎಲ್ಲಾ ಕಡೆಯೂ ಕಂಡಬಂದಿದೆ, ಮಾನ್ಯ ತಿಮಪ್ಪನವರು ಮಾತನಾಡುತ್ತಾ ೨೦ ಪರ್ಸೆಂಟ್ ಇರುವ ಕಡೆ ಎತಕ್ಕೆ

ಮಾಡುತ್ತೀರಿ ಎಂದು ಹೇಳಿದರು. ೨೦ ಪರ್ಸೆಂಟ್ ಇದ್ದರೂ ಅನೇಕ ತೊಂದರೆಗಳು ಇದ್ದೇ ಇದೆ. ಎಷ್ಟೋ ಕಡೆ ಮುನಿಸಿಪಾಲಿಟಿಗಳೂ ಸಹ ವರ್ಷಾನುಗಟ್ಟಲೆ ಆದರೂ ಮನೆ ನಿವೇಶನವನ್ನು ಕೊಡುವುದಕ್ಕೆ ಆಗಿಲ್ಲ. ಅಲ್ಲಿ ವಾಸ ಮಾಡತಕ್ಕ ಜನರು ನಾನಾ ರೀತಿಯಾದ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ ನಮ್ಮ ಸರ್ಕಾರದ ಉದ್ದೇಶ, ಬೆಂಗಳೂರು ನಗರಕ್ಕೆ ಅಷ್ಟೇ ಅಲ್ಲ ಬೆಳೆಯುತ್ತಾ ಇರತಕ್ಕ ಎಲ್ಲಾ ಪಟ್ಟಣಗಳು ಎನು ಇವೆ ತಾಲ್ಲೂಕು ಹೆಡಕ್ವಾರ್ಟರ್ಸ್ ಆದಿಯಾಗಿ, ಮುನಿಸಿಪಾಲಿಟಿಗಳಿಂದ ನಿರ್ದಿಷ್ಟವಾದ ಕಾಲದಲ್ಲಿ ಯಾವ ಜನರು ನಿವೇಶನ ಇಲ್ಲದೇ ತೊಂದರೆ ಪಡುತ್ತಿದ್ದಾರೆ, ಅದರಲ್ಲಿಯೂ ಆರ್ಥಿಕವಾಗಿ ಹಿಂದುಳಿದಿರತಕ್ಕವರಿಗೆ, ಹಳ್ಳಿಗಳಲ್ಲಿ ಯಾವ ರೀತಿಯಾಗಿ ಮನೆ ಜಾಗವನ್ನು ಒದಗಿಸಿ ಕೊಡುತ್ತಿದ್ದೇವೋ ಅದೇ ರೀತಿಯಾಗಿ ಒದಗಿಸಿಕೊಡಬೇಕೆಂಬುದೇ ಸರ್ಕಾರದ ಉದ್ದೇಶವಾಗಿದೆ. ಹಾಗೇ ಬೆಂಗಳೂರು ಡೆವಲಪ್‌ಮೆಂಟ್ ಆಥಾರಿಟಿಯನ್ನು ಮಾಡಿರುವುದರಿಂದ ಬೆಂಗಳೂರು ನಗರದ ಅಭಿವೃದ್ಧಿಗೆ ತುಂಬಾ ಸಹಾಯಕವಾಗುತ್ತದೆ ಎನ್ನುವ ಅಭಿಪ್ರಾಯ ಇಟ್ಟುಕೊಂಡು, ಈ ವಂಸೂದೆಯನ್ನು ತಮ್ಮ ಮುಂದೆ ಮಂಡಿಸಿದ್ದೇನೆ. ಇದಕ್ಕೆ ತಾವೆಲ್ಲರೂ ಒಪ್ಪಿಗೆ ಕೊಡುತ್ತೀರಿ ಎನ್ನುವ ವಿಶ್ವಾಸ ನನಗೆ ಇದೆ.

ಉಪಾಧ್ಯಕ್ಷರು.—ಈಗ ಸಭೆ ಮುಂದುವರೆದು ಪುನಃ ನಾಳೆ ಒಂದು ಗಂಟೆಗೆ ಸೇರುವುದು.

The house adjourned at four Minutes past six of the clock to meet again at one of the clock on Wednesday the 11th February 1976.